ದುಡ್ಡು ಕಳುವಾದ ಸಂಕಟದಿಂದಲೂ ಚುರುಕ್ ಎಂದಿತ್ತು.

## ಜಗಲಿಯಲ್ಲಿ ನಿದ್ದೆ, ಅಸ್ತಿತ್ವಕ್ಕಾಗಿ ಪರದಾಟ

ಬೆಂಗಳೂರಿನ ಮೆಜೆಸ್ಟಿಕ್ ಅದೆಷ್ಟೋ ಹೀರೊಗಳ ಕನಸಿಗೆ ಬಣ್ಣದ ನೀರೆರೆದಿದೆ, ಆಶ್ರಯ ನೀಡಿದೆ. ಮೆಜೆಸ್ಟಿಕ್ ಎಲ್ಲಿಯೂ ಸ್ತಬ್ಧವಾದಂತೆ ಅನಿಸುವುದೇ ಇಲ್ಲ. ರಾತ್ರಿಯ ನೀರವದಲ್ಲೂ ಹೆಜ್ಜೆಗಳ ಸದ್ದು ಮೆಜೆಸ್ಟಿಕ್‌ನಲ್ಲಿ ಅನುರಣಿಸುತ್ತಲೇ ಇರುತ್ತವೆ.

ದಿನನಿತ್ಯದ ಉಳಿವಿಗಾಗಿ ಪರದಾಡುತ್ತಿರುವ ಎಷ್ಟೋ ಜೀವಗಳ ನಡುವೆ ಇಸ್ಮಾಯಿಲ್ ಸಹೋದರರು ಬೆರೆತುಹೋದರು. ವಸತಿ ಗೃಹವೊಂದರಲ್ಲಿ ಮಲಗುತ್ತಿದ್ದರು. ಕಂಡ ಕಂಡವರಲ್ಲಿ ಕೆಲಸಕ್ಕಾಗಿ ಇಬ್ಬರೂ ಅಂಗಲಾಚುತ್ತಲೇ ಇದ್ದರು. ಆದರೆ ಕೆಲಸ ಸಿಗುವುದೇನು ತಮಾಷೆಯೇ?

ಶಿವರಾಜ್‌ಕುಮಾರ್ ಅಭಿನಯದ 'ಆನಂದ್' ಸಿನಿಮಾ ತೆರೆ ಕಂಡ ಸಂದರ್ಭವದು. ಥಿಯೇಟರ್ ಎದುರು ಜನಸಂದಣಿ. 9 ರೂಪಾಯಿ ಬೆಲೆಯ ಟಿಕೆಟನ್ನು ಕಾಳಸಂತೆಯಲ್ಲಿ 25 ರೂಪಾಯಿಗೆ ಮಾರುತ್ತಿದ್ದವರನ್ನು ಕಂಡು ಸಹೋದರರಿಗೆ ಗಳಿಕೆಯ ದಾರಿಯೊಂದು ಕಾಣಿಸಿತು. ಕೆಲ ಕಾಲ ಬ್ಲಾಕ್ ಟಿಕೆಟ್ ಮಾರಾಟವನ್ನೂ ಮಾಡಿದರು. ಆದರೆ, ಬ್ಲಾಕ್ ಟಿಕೆಟ್ ದಂಧೆಯಲ್ಲಿ ಆ ಮೊದಲೇ ತೊಡಗಿಕೊಂಡಿದ್ದವರಿಗೆ ಇಸ್ಮಾಯಿಲ್ ಸಹೋದರರು ಸ್ಪರ್ಧಿಗಳಂತೆ ಕಾಣಿಸಿ, ಕೆಂಡ ಕಾರತೊಡಗಿದರು. ಇಸ್ಮಾಯಿಲ್ ಹಲ್ಲೆಗೊಳಗಾಗಿ ಗಾಯಗೊಂಡರು. ಅವರ ಪರಿಸ್ಥಿತಿ ಕಂಡು ಮರುಗಿದ ಒಬ್ಬರು, ಅಲಂಕಾರ್ ಕಾಂಪ್ಲೆಕ್ಸ್‌ನಲ್ಲಿ ಪಾನಿಪುರಿ ಅಂಗಡಿಯೊಂದರಲ್ಲಿ ಕೆಲಸ ಕೊಡಿಸಿದರು. ಅಲ್ಲಿಂದ ಬದುಕು ಹೊಸತೊಂದು ತಿರುವಿಗೆ ಹೊರಳಿಕೊಂಡಿತ್ತು.

ಪಾನಿಪುರಿ ಅಂಗಡಿಯಲ್ಲಿ ದಿನಕ್ಕೆ ನಲವತ್ತು ಬಿಂದಿಗೆ ನೀರನ್ನು ತುಂಬಿಸುತ್ತಲೇ – ಪಾನಿಪುರಿ, ಸಮೋಸ ಹೇಗೆ ಮಾಡುವುದೆಂದು ಕಲಿತರು. ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದ ಇಸ್ಮಾಯಿಲ್ ಯಾವುದೇ ಕೆಲಸವನ್ನು ಕೀಳಾಗಿ ಕಾಣಲಿಲ್ಲ. ಎಲ್ಲವನ್ನು ಎಲ್ಲರನ್ನು ಪ್ರೀತಿಸುತ್ತಲೇ ಸಾಗಿದರು. ರಾತ್ರಿಯಿಡೀ ಮಲಗದೆ ಏನೋ ಹೊಸದಾಗಿ ತಿಂಡಿ ತಿನಿಸುಗಳನ್ನು ಮಾಡುತ್ತಲೇ ಹೋದರು. ಹೀಗೆ 300 ರೂಪಾಯಿ ಸಂಬಳದ ಸಪ್ಲೈಯರ್ ಹುದ್ದೆಯಿಂದ, 450 ರೂಪಾಯಿಯ ಸಂಬಳದ ಕೌಂಟರ್‌ಗೆ ಪ್ರವೇಶ ಪಡೆದರು. ಸ್ವಲ್ಪ ಸಮಯದಲ್ಲೇ ಸಂಬಳ 1500 ರೂಪಾಯಿಗೆ ಮುಟ್ಟಿತು.

ಇಸ್ಮಾಯಿಲ್‌ರ ಬದುಕು ಬೆಂಗಳೂರಿನಿಂದ ದಾವಣಗೆರೆಗೆ ಬದಲಾಯಿತು. ಅಲ್ಲಿನ ಹೋಟೆಲೊಂದರಲ್ಲಿ ವೃತ್ತಿ ಬದುಕು ಮುಂದುವರೆಯಿತು. ಇಂಡಿಯನ್, ಚೈನೀಸ್ ಸೇರಿದಂತೆ ಯಾವುದೇ ರೀತಿಯ ಆಹಾರ ಸಿದ್ಧಪಡಿಸುವುದನ್ನು ಕಲಿಯುತ್ತಲೇ ಇದ್ದರು. ತಮ್ಮದೇ ಶೈಲಿಯಲ್ಲಿ ಅಡುಗೆಯನ್ನು ಧ್ಯಾನಿಸತೊಡಗಿದರು. ಮ್ಯಾನೇಜರ್ ಆಗಿಯೂ ಕಾರ್ಯನಿರ್ವಹಿಸಿದರು. ಅಲ್ಲಿ ಸಂಬಳ ಅನಿಯಮಿತ ಆದುದರಿಂದ ಬೆಂಗಳೂರಿಗೆ ಮರಳಿದರು.



## ಕೈ ಹಿಡಿದ ಸ್ವಂತ ದುಡಿಮೆ

ಮತ್ತೆ ಬೆಂಗಳೂರಿಗೆ ಬಂದ ಇಸ್ಮಾಯಿಲ್ ಪಾನಿಪುರಿ ಸ್ಟಾಲ್ ಆರಂಭ ಮಾಡಿದರು. ವ್ಯಾಪಾರ ನಿಧಾನವಾಗಿ ಕೈ ಹತ್ತತೊಡಗಿತು. ಯಶಸ್ಸಿನ ಜೊತೆಗೆ ಇನ್ನಷ್ಟು ಕಲಿಯುವಿಕೆಯ ಆಸಕ್ತಿ ಮತ್ತು ಪರಿಶ್ರಮ ಹೋಟೆಲ್ ಒಂದರ ಆರಂಭಕ್ಕೆ ಮುನ್ನುಡಿಯಾಯಿತು. ಈಗ ಮಲ್ಲೇಶ್ವರಂನಲ್ಲಿರುವ 'ಶುಚಿ ರುಚಿ' ಹೊಸತನದೊಂದಿಗೆ ಭೋಜನಪ್ರಿಯರಿಗೆ ಪ್ರಿಯವಾಗಿದೆ.

ಅಡುಗೆಯೊಂದಿಗೆ ಬದುಕನ್ನು ಬೆಸೆದುಕೊಂಡ ಇಸ್ಮಾಯಿಲ್ ಅವರು ಏನೋ ಒಂದು ಹೊಸತನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತಲೇ ಇದ್ದಾರೆ. ಅವರೇ ಕಂಡುಹಿಡಿದಿರುವ ಕೆಲವು ಹೊಸ ವಿಧಾನಗಳು ಹೊಸ ರುಚಿಯನ್ನು ಜನರಿಗೆ ಉಣಬಡಿಸುತ್ತಿವೆ.

## ಶೆಫ್ ಹೃದಯಾಳದಿಂದ...

ಅಡುಗೆಕಲೆಯ ಬಗ್ಗೆ ಇಸ್ಮಾಯಿಲ್ ಅವರನ್ನು ಕೇಳಿದರೆ ಅವರು ಹೇಳುವುದು: 'ನನಗಾರೂ ಗುರುವಿಲ್ಲ. ಆದರೆ, ನನಗೆ ಗುರಿಯಿತ್ತು. ಈ ವೃತ್ತಿಯನ್ನು ಪೂಜಿಸುವ ಹೃದಯವಿತ್ತು. ಪ್ರತಿ ಹಂತದಲ್ಲೂ ಕಲಿಯುತ್ತಲೇ ಹೋದೆ. ಬಿದ್ದರೂ ಎದ್ದರೂ ಎಲ್ಲೂ ಸಂಯಮ ಕೆಡಿಸಿಕೊಳ್ಳಲಿಲ್ಲ. ವೃತ್ತಿಯನ್ನು ಉಸಿರಿನಷ್ಟೇ ಪ್ರೀತಿಸಿದಾಗ ಬರುವ ಅಡ್ಡಗೋಡೆಗಳೆಲ್ಲಾ ಬಿದ್ದು ಹೋಗುತ್ತವೆ. ನನಗೆ ಕಾಣುವುದು ಸಾಧನೆಯ ಬಯಲಷ್ಟೇ'.

ಇಸ್ಮಾಯಿಲ್ ಅವರ ಪತ್ನಿ ನಾಲ್ಕು ಜನ ಹೆಣ್ಣು ಮಕ್ಕಳಿದ್ದ ಕುಟುಂಬಕ್ಕೆ ಸೇರಿದವರು. ಕುಟುಂಬದ ಯಜಮಾನ ತೀರಿಕೊಂಡ ಬಳಿಕ ಇಸ್ಮಾಯಿಲ್ ಅವರೇ ಪತ್ನಿಯ ತವರಿನವರಿಗೆ ಆಸರೆಯಾಗಿದ್ದಾರೆ. ಮಗುವಾದ ನಂತರವೂ ಪತ್ನಿಯನ್ನು ಓದಿಸಿದ್ದಾರೆ. ಈಗ ಅವರ ಪತ್ನಿ ಕಂಪನಿಯೊಂದರಲ್ಲಿ ಉತ್ತಮ ಹುದ್ದೆಯನ್ನು ಅಲಂಕರಿಸಿದ್ದಾರೆ.

ತಮ್ಮ ಅಪೂರ್ಣ ಶಿಕ್ಷಣದ ಬಗ್ಗೆ ಇಸ್ಮಾಯಿಲ್ ಅವರಿಗೆ ಬೇಸರವಿದೆ. ಹಾಗಾಗಿ, ಓದುವವರನ್ನು ಕಂಡರೆ ಅವರಿಗೆ ವಿಪರೀತ ಕಾಳಜಿ. ದುಡಿಮೆ ಮತ್ತು ಓದು, ಎರಡನ್ನೂ ಸಂಭಾಳಿಸಿಕೊಂಡು ಬದುಕನ್ನು ಕಟ್ಟಿಕೊಂಡವರು ಅವರ ಹೋಟೆಲ್‌ನಲ್ಲಿದ್ದಾರೆ. ಕೆಲವೊಂದು ಶಾಲೆಗಳಲ್ಲಿ ರುಚಿಯಾದ ತಿಂಡಿ ತಿನಿಸುಗಳನ್ನು ನೀಡಿ, ಗೈರಾಗುತ್ತಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತೆ ಶಾಲೆಗೆ ಬರುವಂತೆ ಇಸ್ಮಾಯಿಲ್ ಪ್ರೋತ್ಸಾಹಿಸಿದ್ದಾರೆ. ಶಿವರಾತ್ರಿ ಸಂದರ್ಭದಲ್ಲಿ ಸಾವಿರಾರು ಮಂದಿಗೆ ಉಚಿತ ಭೋಜನದ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

'ನಾನು ಮಸೀದಿ–ಮಂದಿರ ಎಂದು ಯೋಚನೆಯನ್ನು ಮಾಡೋದಿಲ್ಲ. ನಮಾಜ್ ಮಾಡುತ್ತೇನೆ. ಮಂದಿರ ಕಂಡರೆ ಅಲ್ಲೂ ಪ್ರಾರ್ಥನೆ ಮಾಡುತ್ತೇನೆ. ಧರ್ಮ–ಜಾತಿಗಳ ಹಂಗು ನಮಗೇಕೆ?' ಎನ್ನುತ್ತಾರೆ.

'ವೃತ್ತಿ ಮುಖ್ಯ. ಅದಕ್ಕಿಂತಲೂ ಮೊದಲು ವ್ಯಕ್ತಿ ಮುಖ್ಯ, ವ್ಯಕ್ತಿತ್ವ ಮುಖ್ಯ. ಮಾನವೀಯತೆ ಎಲ್ಲಕ್ಕೂ ಮೊದಲು' ಎಂದು ಇಸ್ಮಾಯಿಲ್ ಹೇಳುತ್ತಾರೆ.

ಇಸ್ಮಾಯಿಲ್ ಅವರದು ಏಕಮುಖಿ ಇಲ್ಲವೇ ವ್ಯಕ್ತಿಗತ ಬೆಳವಣಿಗೆ ಮಾತ್ರವಲ್ಲ; ಅದೆಷ್ಟೋ ಮಂದಿಗೆ ಸ್ವಾವಲಂಬಿಯಾಗಲು ಬೇಕಾದ ತರಬೇತಿಯನ್ನು ಅವರು ನೀಡುತ್ತಿದ್ದಾರೆ. ರಾಷ್ಟ್ರೀಯ ಅಂತರರಾಷ್ಟ್ರೀಯ ಗುಣಮಟ್ಟದ ತರಬೇತಿ ಅವರದು.

ಹೊಸಬರನ್ನು ರೂಪಿಸುವ, ಹೊಸತನ್ನು ಅನ್ವೇಷಿಸುವ ಎಲ್ಲರನ್ನೂ ಪ್ರೀತಿಸುವ ಇಸ್ಮಾಯಿಲ್ ಅವರಿಗೆ ಅಡುಗೆ ಎನ್ನುವುದೊಂದು ಧ್ಯಾನ. ಹೊಸ ಪೀಳಿಗೆಯ ಸಾಧಕರಿಗೆ ಇಸ್ಮಾಯಿಲ್ ಅವರ ಬದುಕಿನಲ್ಲಿ ಸ್ಫೂರ್ತಿಯ ಪಾಠಗಳಿವೆ.

ಪ್ರತಿಕ್ರಿಯಿಸಿ: feedback@sudha.co.in